**ದಿನಾಂಕಃ 11.08.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

3. ದಿ. 13.11.2020 ರಂದು ಈ ಸ್ವತ್ತುಗಳನ್ನು FSL ಬೆಂಗಳೂರಿಗೆ ನೀಡಿ ದಿ. 15.11.2020 ರಂದು ಆ ಬಗ್ಗೆ ತನಿಖಾಧಿಕಾರಿಗೆ ಸ್ವೀಕೃತಿಯನ್ನು ನೀಡಿ ವರದಿ ಮಾಡಿರುತ್ತೇನೆ. ನನಗೆ ಕೊಟ್ಟ ರಹದಾರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎಸ್.ಎಂ.ಪಿ ವಕೀಲರಿಂದ ಶ್ರೀ ಐ.ಎಸ್ ವಕೀಲರ ಪರವಾಗಿಃ**

4. ಚಾಸಾ-17 ರವರು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದರು. ರಹದಾರಿ ಪತ್ರವನ್ನು ನಾನು ದಿ. 15.11.2020 ರಂದು ಠಾಣಾಧಿಕಾರಿಗೆ ಕೊಟ್ಟಿರುತ್ತೇನೆ. ನಾನು RFSL ಮಂಗಳೂರಿಗೆ ಯಾವುದೇ ಸ್ವತ್ತುಗಳನ್ನು ಕೊಟ್ಟಿರುವುದಿಲ್ಲ. ನಾನು ಹೇಳಿದ ದಿನದಂದು ನಾನು FSL ಬೆಂಗಳೂರಿಗೆ ಹೋಗಿರುವುದಿಲ್ಲ ಮತ್ತು ಅಲ್ಲಿಂದ ಯಾವುದೇ ಸ್ವೀಕೃತಿಯನ್ನು ಪಡೆದುಕೊಂಡು ಬಂದು ತನಿಹಾಧಿಕಾರಿಯ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.